# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1024 |
| ಉತ್ತರಿಸಬೇಕಾದ ದಿನಾಂಕ | 25.08.2026 |
| ಸದಸ್ಯರ ಹೆಸರು | ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ಸಚಿವರು | ಮಾನ್ಯ ವಸತಿ ಸಚಿವರು |

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಪ್ರಸ್ತುತ ಲಭ್ಯವಿರುವ ಮಾಹಿತಿ ಪ್ರಕಾರ ಒಟ್ಟು ಎಷ್ಟು ಕೊಳಚೆ (ಸ್ಲಂ) ಪ್ರದೇಶಗಳನ್ನು ಗುರುತಿಸಲಾಗಿದೆ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಪೂರ್ಣ ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಒಟ್ಟು 3035 ಕೊಳಚೆ ಪ್ರದೇಶಗಳನು ಗುರುತಿಸಲಾಗಿದ್ದು, ಅವುಗಳ ಪೈಕಿ 2866 ಕೊಳಗೇರಿ ಪ್ರದೇಶಗಳನ್ನು ಮಂಡಳಿ ಕಾಯ್ದೆಯಡಿ ಘೋಷಿಸಲಾಗಿರುತ್ತದೆ.</td></tr>
<tr><td>ಆ)</td><td>ಗುರುತಿಸಲಾಗಿರುವ ಈ ಕೊಳಚೆ ಪ್ರದೇಶಗಳು ಪ್ರಸ್ತುತ ಎಷ್ಟು ವರ್ಷಗಳಿಂದ ಅಧಿಕೃತವಾಗಿ ಕೊಳಚೆ ಪ್ರದೇಶಗಳ ಪಟ್ಟಿಯಲ್ಲಿಯೇ ಉಳಿದುಕೊಂಡಿವೆ; (ವರ್ಷವಾರು ವಿವರ ನೀಡುವುದು)</td><td>ರಾಜ್ಯದಲ್ಲಿ ಪ್ರಸ್ತುತ ಲಭ್ಯವಿರುವ ಮಾಹಿತಿ ಪ್ರಕಾರ ಕಳೆದ ಮೂರು ವರ್ಷಗಳಲ್ಲಿ ಒಟ್ಟು 54 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದೆ. ಸದರಿ ಕೊಳಚೆ ಪ್ರದೇಶಗಳ ಜಿಲ್ಲಾವಾರು, ತಾಲ್ಲೂಕುವಾರು ಹಾಗೂ ಅಧಿಕೃತವಾಗಿ ಪ್ರಸ್ತಾವನೆ ಸಲ್ಲಿಸಿರುವ ವರ್ಷವಾರು ವಿವರಗಳನ್ನು ಅನುಬಂಧ – ಅ ರಲ್ಲಿ ಒದಗಿಸಲಾಗಿದೆ.</td></tr>
<tr><td>ಇ)</td><td>ಕಳೆದ ಮೂರು ವರ್ಷಗಳಲ್ಲಿ ಈ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ವಸತಿ ಹೀನರಿಗೆ ಸರ್ಕಾರದಿಂದ ವಸತಿ ಸೌಲಭ್ಯ ಒದಗಿಸಲು ಯಾವ ಯಾವ ಯೋಜನೆಗಳಡಿ ಒಟ್ಟು ಎಷ್ಟು ಮನೆಗಳನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದೆ; ಹಾಗೂ ಪ್ರಸ್ತುತ ಎಷ್ಟು ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆಯೇ:</td><td>ಕಳೆದ ಮೂರು ವರ್ಷಗಳಿಂದ ಮಂಡಳಿ ಯಾವುದೇ ಹೊಸ ಮನೆಗಳ ನಿರ್ಮಾಣ ಮಂಜೂರಾತಿ ದೊರಕಿರುವುದಿಲ್ಲ. ಪ್ರಸ್ತುತ ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) 2.0 ನ್ನು ಸೆಪ್ಟೆಂಬರ್ 2024ರಲ್ಲಿ ಜಾರಿಗೊಳಿಸಿದ್ದು, ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ದಿನಾಂಕ:23.05.2025ರ ಮಾರ್ಗ-ಸೂಚಿಯಂತೆ ಮನೆಗಳ ನಿರ್ಮಾಣಕ್ಕೆ ಗುರಿ ನಿಗದಿಪಡಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.<br><br>ಮಂಡಳಿಗೆ 2015-16ನೇ ಸಾಲಿನಿಂದ 2018-19ನೇ ಸಾಲಿನ ವರೆಗೆ ವಿವಿಧ ಹಂತಗಳಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯನು ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ಡಾ: ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನು ಸಂಯೋಜನೆಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದ್ದು ಸದರಿ ಯೋಜನೆಯಡಿ ರಾಜ್ಯಾದ್ಯಂತ ವಿವಿಧ ಕೊಳಗೇರಿ ಪ್ರದೇಶಗಳಲ್ಲಿ ಒಟ್ಟು 1,78,600 (AHP) ಮನೆಗಳ ನಿರ್ಮಾಣಕ್ಕೆ ಮಂಜೂರಾತಿ ದೊರೆತಿರುತ್ತದೆ. ಅವುಗಳ ಪೈಕಿ 79134 ಮನೆಗಳನ್ನು ಪೂರ್ಣಗೊಳಿಸಿ, ಹಂಚಿಕೆ ಮಾಡಲಾಗಿದೆ.</td></tr>
<tr><td>ಈ)</td><td>ಕೊಳಚೆ ಪ್ರದೇಶದಲ್ಲಿ ಮನೆಗಳನು ನಿರ್ಮಿಸಿ, ಫಲಾನುಭವಿಗಳಿಗೆ ಹಂಚಿಕೆ ಮಾಡಿದ ತರುವಾಯವೂ ರಾಜ್ಯದಲ್ಲಿ ಪ್ರಸ್ತುತ ಇನು ಎಷ್ಟು ಕೊಳಚೆ ಪ್ರದೇಶಗಳು ಅಭಿವೃದ್ಧಿಯಾಗದ / ಪರಿಹಾರ ಕಾಣದೆ ಬಾಕಿ ಉಳಿದಿವೆ;</td><td rowspan="2">ವಸತಿ ಯೋಜನೆ :-<br><br>ರಾಜ್ಯವನ್ನು ಕೊಳಗೇರಿ ಮುಕ್ತಗೊಳಿಸಲು ಮಂಡಳಿ ವತಿಯಿಂದ ಕೇಂದ್ರ ಪುರಸ್ಕೃತ ವಿವಿಧ ವಸತಿ ಯೋಜನೆಗಳಾದ ನರ್ಮ್-ಬಿ.ಎಸ್.ಯು.ಪಿ. / ಐ.ಹೆಚ್.ಎಸ್.ಡಿ.ಪಿ. ಮತ್ತು ರಾಜೀವ್ ಆವಾಸ್ ಯೋಜನೆಯಡಿ ಆಯ್ದ ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳೊಂದಿಗೆ ವಸತಿ ಕಲ್ಪಿಸಿ, ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ವಿವರಗಳು ಈ ಕೆಳಕಂಡತಿವೆ.<br><br>
<table>
<tr><th>ಕ್ರ ಸಂ</th><th>ಯೋಜನೆ</th><th>ನಿರ್ಮಿಸಿರುವ ಮನೆಗಳ ಸಂಖ್ಯೆ</th><th>ಹಂಚಿಕೆ ಮಾಡಿರುವ ಮನೆಗಳ ಸಂಖ್ಯೆ</th><th>ಕೊಳಗೇರಿ ಪ್ರದೇಶಗಳ ಸಂಖ್ಯೆ</th></tr>
<tr><td>1.</td><td>ಬಿ.ಎಸ್. ಯು.ಪಿ.</td><td>23315</td><td>23315</td><td>133</td></tr>
</table>
</td></tr>
<tr><td>ಉ)</td><td>ಬಾಕಿ ಉಳಿದಿರುವ ಕೊಳಚೆ ಪ್ರದೇಶಗಳಲ್ಲಿರುವ ವಸತಿರಹಿತರಿಗೆ ಪೂರ್ಣ ಪ್ರಮಾಣದಲ್ಲಿ ಮನೆಗಳನ್ನು ನಿರ್ಮಿಸಿ ಕೊಡಲು ಸರ್ಕಾರದ ಬಳಿ ಇರುವ ಕಾಲಬದ್ಧ</td></tr>
</table>

| | | | | | | |
|---|---|---|---|---|---|---|
| | ಯೋಜನೆ ಅಥವಾ ಕ್ರಿಯಾ ಯೋಜನೆ ಏನು? (ಸಂಪೂರ್ಣ ವಿವರ ನೀಡುವುದು) | 2. | ಐ.ಹೆಚ್.ಎಸ್.ಡಿ.ಪಿ | 17237 | 17237 | 172 |
| | | 3. | ರಾಜೀವ್ ಆವಾಸ್ ಯೋಜನೆ | 19897 | 19181 | 77 |
| | | | | 60449 | 59733 | 382 |

ಪ್ರಸ್ತುತ ಮಂಡಳಿಗೆ 2015-16ನೇ ಸಾಲಿನಿಂದ 2018-19ನೇ ಸಾಲಿನ ವರೆಗೆ ವಿವಿಧ ಹಂತಗಳಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯನು ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ಡಾ: ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಸಂಯೋಜನೆಗೊಳಿಸಿ ಅನುಷ್ಠಾನ ಗೊಳಿಸಲಾಗುತ್ತಿದ್ದು ಸದರಿ ಯೋಜನೆಯಡಿ ರಾಜ್ಯಾದ್ಯಂತ ಭಾಗಶಃ ಸುಮಾರು 856 ಕೊಳಗೇರಿ ಪ್ರದೇಶಗಳಲ್ಲಿ ಒಟ್ಟು 1,78,600 (AHP) ಮನೆಗಳ ನಿರ್ಮಾಣಕ್ಕೆ ಮಂಜೂರಾತಿ ದೊರೆತಿರುತ್ತದೆ.

ಒಟ್ಟು ಮಂಜೂರಾದ ಮನೆಗಳ ಪೈಕಿ ಈವರೆಗೆ ಒಟ್ಟಾರೆ 1,30,943 ಮನೆಗಳನು ಪ್ರಾರಂಭಿಸಿದ್ದು, 90473 ಮನೆಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ 40,470 ಮನೆಗಳ ನಿರ್ಮಾಣ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. 47,657 ಮನೆಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

ಪೂರ್ಣಗೊಂಡಿರುವ ಮನೆಗಳ ಪೈಕಿ ಮೊದಲನೇ ಹಂತದಲ್ಲಿ ದಿನಾಂಕ:02/03/2024 ರಂದು 36,789 ಮನೆಗಳನ್ನು ಮತ್ತು 2ನೇ ಹಂತದಲ್ಲಿ ದಿನಾಂಕ: 24.01.2026 ರಂದು 42,345 ಮನೆಗಳನ್ನು ಒಟ್ಟಾರೆ 79,134 ಮನೆಗಳನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳ ಅಮೃತ ಹಸ್ತದಿಂದ ಲೋಕಾರ್ಪಣೆ ಮಾಡಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ.

ಮಂಡಳಿಯಿಂದ ಘೋಷಿಸಲಾದ ಕೊಳಗೇರಿ ಪ್ರದೇಶಗಳ ಪೈಕಿ 1233 ಕೊಳಗೇರಿ ಪ್ರದೇಶಗಳಲ್ಲಿ ಆದ್ಯತೆ ಮೇರೆಗೆ ಭಾಗಶಃ ವಸತಿ ಕಲ್ಪಿಸಲಾಗಿದೆ.

ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) 2.0 ನ್ನು ಸೆಪ್ಟಂಬರ್ 2024ರಲ್ಲಿ ಜಾರಿಗೊಳಿಸಿದ್ದು, ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ದಿನಾಂಕ:23.05.2025ರ ಮಾರ್ಗಸೂಚಿಯಂತೆ ಮನೆಗಳ ನಿರ್ಮಾಣಕ್ಕೆ ಗುರಿ ನಿಗದಿಪಡಿಸಲು ಪರಿಶೀಲಿಸಲಾಗುತ್ತಿದೆ. ಗುರಿ ನಿಗದಿಪಡಿಸಿದ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ:ವಇ 60 ಎಸ್‌ಬಿಎಂ 2026

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ ಸಚಿವರು

## ಅನುಬಂಧ–ಅ

| ಕ್ರಸಂ | ಪ್ರಸ್ತಾವನೆ ವರ್ಷ | ಜಿಲ್ಲೆ | ವಿಧಾನಸಭಾ ಕ್ಷೇತ್ರ / ತಾಲ್ಲೂಕು | ಕೊಳಚೆ ಪ್ರದೇಶದ ಹೆಸರು | ಪ್ರಸ್ತಾವನೆ ಸಲ್ಲಿಸಿದ ದಿನಾಂಕ |
|---|---|---|---|---|---|
| 1 | 2023 | ಮಂಡ್ಯ | ಮಂಡ್ಯ | ಲ್ಯಾಂಡ್ ಆರ್ಮಿ ಕಛೇರಿ ಪಕ್ಕದ ಪ್ರದೇಶ | 06-09-2023 |
| 2 | 2023 | ಕೊಪ್ಪಳ | ಯಲಬುರ್ಗಾ | ಅಂಬೇಡ್ಕರ್ ಕಾಲೋನಿ-1, ಭಜಂತ್ರಿಯವರ ಓಣಿ, ಕುಲ್ಮಿಯವರ ಓಣಿ, ಮುಚಗೇರ ಓಣಿ, ಹರಿಜನ ಓಣಿ | 19-10-2023 |
| 3 | 2023 | ಕೊಪ್ಪಳ | ಯಲಬುರ್ಗಾ | ಅಂಬೇಡ್ಕರ ನಗರ ಕಾಲೋನಿ-2 | 19-10-2023 |
| 4 | 2023 | ಕೊಪ್ಪಳ | ಯಲಬುರ್ಗಾ | ಕೋಳಿಪೇಟೆ | 19-10-2023 |
| 5 | 2023 | ಕೊಪ್ಪಳ | ಯಲಬುರ್ಗಾ | ಬಾಬು ಜಗಜೀವನರಾಮ ಕಾಲೋನಿ | 19-10-2023 |
| 6 | 2023 | ಬೆಂಗಳೂರು ನಗರ | ಸಿ.ವಿ.ರಾಮನ್ ನಗರ | ಅಂಬೇಡ್ಕರ್ ಕಾಲೋನಿ | 27-10-2023 |
| 7 | 2023 | ಬೆಂಗಳೂರು ನಗರ | ಸಿ.ವಿ.ರಾಮನ್ ನಗರ | ಎ.ಕೆ.ಕಾಲೋನಿ | 27-10-2023 |
| 8 | 2023 | ಬೆಂಗಳೂರು ನಗರ | ಸಿ.ವಿ.ರಾಮನ್ ನಗರ | 'ಸಿ' ಕಾಲೋನಿ | 27-10-2023 |
| 9 | 2024 | ಬೆಂಗಳೂರು ನಗರ | ಕೆ.ಆರ್.ಪುರಂ | ಟಿ.ಸಿ.ಪಾಳ್ಯ ವಿನಾಯಕ ಬಡಾವಣೆ | 20-01-2024 |
| 10 | 2024 | ವಿಜಯಪುರ | ಬಬಲೇಶ್ವರ | ವಾರ್ಡ್ ನಂ.11 ರ ಎಸ್.ಸಿ.ಕಾಲನಿ ಅಡವಿ ಸಂಗಾಪುರ | 25-01-2024 |
| 11 | 2024 | ಬಳ್ಳಾರಿ | ಬಳ್ಳಾರಿ | ವಾರ್ಡ್ ನಂ.16 ರ ಕಾಟೆಗುಡ್ಡ | 13-03-2024 |
| 12 | 2024 | ಬೆಂಗಳೂರು ನಗರ | ಬೆಂಗಳೂರು ದಕ್ಷಿಣ | ಆಲಹಳ್ಳಿ ಭಾಗ-2 | 29-05-2024 |
| 13 | 2024 | ವಿಜಯಪುರ | ಆಲಮೇಲ | ವಾರ್ಡ್ ನಂ.01 ರ ಗಣೇಶ್ ನಗರ | 18-06-2024 |
| 14 | 2024 | ವಿಜಯಪುರ | ಆಲಮೇಲ | ವಾರ್ಡ್ ನಂ.02 ರ ದನದ ಬಜಾರ | 18-06-2024 |
| 15 | 2024 | ವಿಜಯಪುರ | ಆಲಮೇಲ | ವಾರ್ಡ್ ನಂ.13 & 14 ರ ಅಂಬೇಡ್ಕರ ನಗರ | 18-06-2024 |
| 16 | 2024 | ವಿಜಯಪುರ | ಆಲಮೇಲ | ವಾರ್ಡ್ ನಂ.15 ರ ಬಜಂತ್ರಿ ಓಣಿ ಮತ್ತು ಮಾದರ ಓಣಿ | 18-06-2024 |
| 17 | 2024 | ವಿಜಯಪುರ | ಆಲಮೇಲ | ವಾರ್ಡ್ ನಂ.16 ರ ನಾರಾಯಣಕರ ಗಲ್ಲಿ | 18-06-2024 |
| 18 | 2024 | ವಿಜಯಪುರ | ಆಲಮೇಲ | ವಾರ್ಡ್ ನಂ.18 ರ ತಿಪ್ಪಿ ಗುಂಡಿ | 18-06-2024 |
| 19 | 2024 | ವಿಜಯಪುರ | ಬಬಲೇಶ್ವರ | ವಾರ್ಡ್ ನಂ.08 ರ ಗಣೇಶ್ ನಗರ | 26-06-2024 |
| 20 | 2024 | ವಿಜಯಪುರ | ಬಬಲೇಶ್ವರ | ವಾರ್ಡ್ ನಂ.09 ಮತ್ತು 10 ರ ಡಾ॥ ಬಿ.ಆರ್.ಅಂಬೇಡ್ಕರ ನಗರ | 26-06-2024 |
| 21 | 2024 | ವಿಜಯಪುರ | ಬಬಲೇಶ್ವರ | ವಾರ್ಡ್ ನಂ.12 ರ ಗಾವಠಾಣ ಪ್ಲಾಟ್ ಅಡವಿ ಸಂಗಾಪುರ | 26-06-2024 |
| 22 | 2024 | ಬೆಂಗಳೂರು ನಗರ | ಯಶವಂತಪುರ | ಮಾತಂಗನಗರ | 16-07-2024 |
| 23 | 2024 | ಬೆಂಗಳೂರು ನಗರ | ಟಿ.ದಾಸರಹಳ್ಳಿ | ಕಸ್ತೂರಿನಗರ | 16-07-2024 |

| | | | | | |
|---|---|---|---|---|---|
| 24 | 2024 | ಬೆಂಗಳೂರು ನಗರ | ಬ್ಯಾಟರಾಯನಪುರ | ಮಾತರಮಾಬಾಯಿ | 16-07-2024 |
| 25 | 2024 | ಬೆಂಗಳೂರು ನಗರ | ಬ್ಯಾಟರಾಯನಪುರ | ಶಿವ ಶರಣ ಚೌಡಯ್ಯ ನಗರ | 16-07-2024 |
| 26 | 2025 | ಬೆಂಗಳೂರು ನಗರ | ವಿಜಯನಗರ | ವಿಜಯ ಟಾಕೀಸ್ ಮುಂಭಾಗದಲ್ಲಿನ ಮಾತೆ ಭೀಮಬಾಯಿನಗರ | 03-02-2025 |
| 27 | 2025 | ಧಾರವಾಡ | ಹುಬ್ಬಳ್ಳಿ-ಧಾರವಾಡ | ದುರ್ಗಾ ಕಾಲೋನಿ (ಹಳೇ ಕಮಲಿ) | 07-04-2025 |
| 28 | 2025 | ಬೆಳಗಾವಿ | ಮುನವಳ್ಳಿ | ವಾರ್ಡ್ ನಂ.15 ರ ಸಿದ್ದೇಶ್ವರ ನಗರ | 24-04-2025 |
| 29 | 2025 | ಬೆಳಗಾವಿ | ಮುನವಳ್ಳಿ | ವಾರ್ಡ್ ನಂ.17 ರ ಸಿದ್ದೇಶ್ವರ ನಗರ | 24-04-2025 |
| 30 | 2025 | ಬೆಂಗಳೂರು ನಗರ | ಚಾಮರಾಜಪೇಟೆ | ಫ್ಲವರ್ ಗಾರ್ಡನ್ ಪಶ್ಚಿಮ ಭಾಗ | 12-05-2025 |
| 31 | 2025 | ಬೆಂಗಳೂರು ನಗರ | ಚಿಕ್ಕಪೇಟೆ | ಗುರಪ್ಪ ಗಾರ್ಡನ್ ಭಾಗ-2 | 22-05-2025 |
| 32 | 2025 | ಶಿವಮೊಗ್ಗ | ಭದ್ರಾವತಿ | ರಾಗಿಗುಡ್ಡ ಬಂಗಾರಪ್ಪ ಬಡಾವಣೆ | 22-05-2025 |
| 33 | 2025 | ಬೆಂಗಳೂರು ನಗರ | ದಾಸರಹಳ್ಳಿ | ಅಂಬೇಡ್ಕರ್ ನಗರ | 06-06-2025 |
| 34 | 2025 | ರಾಯಚೂರು | ರಾಯಚೂರು | ವಾರ್ಡ್ ನಂ.02 ರಲ್ಲಿರುವ ಪದ್ಮಾವತಿ ಕಾಲೋನಿ | 27-06-2025 |
| 35 | 2025 | ರಾಯಚೂರು | ರಾಯಚೂರು | ವಾರ್ಡ್ ನಂ.06 ರಲ್ಲಿರುವ ಹೋಸೂರ್ ಜೈಭೀಮನಗರ | 27-06-2025 |
| 36 | 2025 | ರಾಯಚೂರು | ರಾಯಚೂರು | ವಾರ್ಡ್ ನಂ.13 ರಲ್ಲಿರುವ ಅಶೋಕನಗರ (ಜಹೀರಾಬಾದ್) | 27-06-2025 |
| 37 | 2025 | ರಾಯಚೂರು | ರಾಯಚೂರು | ವಾರ್ಡ್ ನಂ.14 ರಲ್ಲಿರುವ ವೀರಾ ಮಾರುತಿ ಸಪ್ಪೆ ಬಜಾರ್ | 27-06-2025 |
| 38 | 2025 | ರಾಯಚೂರು | ರಾಯಚೂರು | ವಾರ್ಡ್ ನಂ.15 ರಲ್ಲಿರುವ ಶಶಿಮಹಲ್ ಟಾಕೀಸ್ ಹಿಂಭಾಗ | 27-06-2025 |
| 39 | 2025 | ರಾಯಚೂರು | ರಾಯಚೂರು | ವಾರ್ಡ್ ನಂ.32 ರಲ್ಲಿರುವ ಅರಬ್ ಮೊಹಲ್ಲಾ ಗುಂಬಾಜ್ ಏರಿಯಾ | 27-06-2025 |
| 40 | 2025 | ರಾಯಚೂರು | ರಾಯಚೂರು | ವಾರ್ಡ್ ನಂ.33 ರಲ್ಲಿರುವ ಯರಮರಸ್ | 27-06-2025 |
| 41 | 2025 | ರಾಯಚೂರು | ರಾಯಚೂರು | ವಾರ್ಡ್ ನಂ.33 ರಲ್ಲಿರುವ ಅಮರಾವತಿ | 27-06-2025 |
| 42 | 2025 | ಶಿವಮೊಗ್ಗ | ಭದ್ರಾವತಿ | ವಾರ್ಡ್ ನಂ.15 ರಲ್ಲಿರುವ ಕಾಳಯ್ಯನ ಕ್ಯಾಂಪ್ ಹೊಸಮನೆ | 05-07-2025 |
| 43 | 2025 | ಧಾರವಾಡ | ಹುಬ್ಬಳ್ಳಿ-ಧಾರವಾಡ | ಸೆಟ್ಲಮೆಂಟ್ ಶಾಂತಿನಿಕೇತನ | 16-07-2025 |
| 44 | 2025 | ಬೆಂಗಳೂರು ನಗರ | ಮಲ್ಲೇಶ್ವರಂ | ಬಾಬು ಜಗಜೀವನರಾಮ್ | 25-08-2025 |
| 45 | 2025 | ಉತ್ತರ ಕನ್ನಡ | ಹಳಿಯಾಳ | ವಾರ್ಡ್ ನಂ.18 ರ ಬಾಂಬೆಚಾಳ | 27-11-2025 |
| 46 | 2025 | ಬೆಳಗಾವಿ | ಬೈಲಹೊಂಗಲ | ಆಶ್ರಯ ಕಾಲನಿ | 29-11-2025 |
| 47 | 2026 | ವಿಜಯನಗರ | ಕೊಟ್ಟೂರು | ಮುದುಕನ ಕಟ್ಟೆ (ಹೊಸ) | 02-01-2026 |
| 48 | 2026 | ಕಲಬುರಗಿ | ಕಲಬುರಗಿ | ಗುಬ್ಬಿ ಕಾಲೋನಿ (ಹಳೇ ಆರ್.ಟಿ.ಸಿ ಹಿಂದುಗಡೆ) | 06-01-2026 |

| | | | | | |
|---|---|---|---|---|---|
| 49 | 2026 | ಧಾರವಾಡ | ಹುಬ್ಬಳ್ಳಿ–ಧಾರವಾಡ | ಆನಂದನಗರ | 09-01-2026 |
| 50 | 2026 | ಧಾರವಾಡ | ಹುಬ್ಬಳ್ಳಿ–ಧಾರವಾಡ | ಬಾಣತಿಕಟ್ಟಿ ವಡ್ಡರ ಓಣಿ | 09-01-2026 |
| 51 | 2026 | ಬೆಂಗಳೂರು ನಗರ | ಬ್ಯಾಟರಾಯನಪುರ | ಅಂಬೇಡ್ಕರ್ ನಗರ ಭಾಗ-1 ಮತ್ತು 2 | 14-01-2026 |
| 52 | 2026 | ಬೆಂಗಳೂರು ನಗರ | ಬ್ಯಾಟರಾಯನಪುರ | ಕೆರೆಕಟ್ಟೆ ಕೋರೆಬಸವ | 14-01-2026 |
| 53 | 2026 | ಕಲಬುರಗಿ | ಕಲಬುರಗಿ | ಗುಲ್ಲಾಬಾವಡಿ | 16-01-2026 |
| 54 | 2026 | ಶಿವಮೊಗ್ಗ | ಶಿವಮೊಗ್ಗ | ಮಾತಂಗಮ್ಮನಬೀದಿ | 30-01-2026 |

ಕಾರ್ಯದರ್ಶಿ
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಬೆಂಗಳೂರು.